2. Notification No, LAW 9 LCF 84 dated 2-8-1985,
The Karnataka Court Fees and Suits Valuation (Amendment) Rule, 1985,

as required under sub section (3) of Section 78 of the Karnataka Court Fees and Suits Valuation Act, 1958.

V SRI RAMESH CHANDAPPA JIGAJINAGI (Minister of state for Excise).— I lay.

1. Notification No. HD 15 PES 82 dated 25-6-1983,
The Karnataka Excise Licences (General Conditions) (Amendment) Rules, 1983,

2. Notification No. HD 8 PES 84 dated 11-4-1985,
The Karnataka Excise (Bottling of liquors) (Amendment) Rules, 1985,

as required under sub-section (3) and (4) of Section 71 of the Karnataka Excise Act, 1965,
MR. SPEAKAR.—papers laid.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ.—ಮಾನ್ಯ ಅಧ್ಯಕ್ಷರೆ,

"ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ೧೦೯ನೇ ನಿಯಮದ ಮೇರೆಗೆ ತಿದ್ದುಪಡಿಯನ್ನು ಒಳಗೊಂಡು ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ೧೯೫೫ನೇ ಇಸವಿಯ ಕರ್ನಾಟಕ ಸಾರ್ವಜನಿಕ ಹಣ, ಚೀಟಿಗಳ ಮಸೂಲಾತಿ ತಿದ್ದುಪಡಿ ವಿಧೇಯಕವನ್ನು ಸಭೆಯ ಪರಿಂದಿಡಬಯಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲಾಯಿತು".

ಶಾಸನ ರಚನಾ ಕಲಾಪಗಳು

೧೯೫೫ನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ವೇತನ, ವಿಶ್ರಾಂತಿ ವೇತನ ಹಾಗೂ ಭತ್ಯೆಗಳ ತಿದ್ದುಪಡಿ ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೆ,

"೧೯೫೫ನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ವೇತನ, ವಿಶ್ರಾಂತಿ ವೇತನ ಹಾಗೂ ಭತ್ಯೆಗಳ ತಿದ್ದುಪಡಿ ವಿಧೇಯಕವನ್ನು ಸಭೆಯಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ".

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

"೧೯೫೫ನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ವೇತನ, ವಿಶ್ರಾಂತಿವೇತನ ಹಾಗೂ ಭತ್ಯೆಗಳ ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮಂತ್ರಿ ಆನುಮಂತಿ ನೀಡಲ್ಪಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೆ,

"ರಿಲೀಫಿನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ವೇತನ, ವಿಶ್ರಾಂತಿ ವೇತನ ಹಾಗೂ ಭತ್ಯಗಳ ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ".

* ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ಮನವಿಗಳು

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು —ಅಜೆಂಡಾದಲ್ಲಿ ನಿಮ್ಮ ಪ್ರಶ್ನೆ ಬಂದಿಲ್ಲ ಎನ್ನುವುದಾದರೆ ನನ್ನ ಕೊಠಡಿಗೆ ತಾವು ದಯವಿಟ್ಟು ಬಂದು ಕೇಳಿ. ಆದರೆ ಅರ್ಜೆಂಟ್ ಆಗಿದೆಂದು ಕಂಡುಬಂದರೆ ನಾಳೆ ಅಥವಾ ನಾಡಿದ್ದೇ ಹಾಕಿಸೋಣ.

ಶ್ರೀ ಪಟಮಕ್ಕಿ ರತ್ನಾಕರ್.—ಸ್ವಾಮಿ, ನಾನು ಪ್ರಶ್ನೆಯನ್ನು ಕಳುಹಿಸಿ ೧೫ ದಿವಸವಾದರೂ ಇನ್ನೂ ಉತ್ತರ ಬಂದಿಲ್ಲ. ತಾವು ಲಿಖಿತವಾಗಿ ಉತ್ತರ ಕೊಡುತ್ತೇವೆಂದು ಹೇಳಿದ್ದರೂ ಏತಕ್ಕೆ ಕೊಡಲಿಲ್ಲ ?

ಅಧ್ಯಕ್ಷರು.—ತಾವು ದಯವಿಟ್ಟು ಕೂಳಿತುಕೊಳ್ಳಿ. ಅದನ್ನೆಲ್ಲಾ ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಫೈಲ್‌ನ್ನು ತರಿಸಿ ನೋಡಬೇಕಾಗುತ್ತದೆ.

ಶ್ರೀ ಪಟಮಕ್ಕಿ ರತ್ನಾಕರ್.—೧೫ ದಿವಸವಾಯಿತು ನಾನು ಕಳುಹಿಸಿ. ಆದರೂ ಉತ್ತರ ಬಂದಿಲ್ಲ. ಆದ್ದರಿಂದ ನಾನು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಬಿ. ಸ್ವಾಮಿರಾವ್.—ಸ್ವಾಮಿ, ನಾನು ಸುಮಾರು ೫೦ ಪ್ರಶ್ನೆಗಳನ್ನು ಕಳುಹಿಸಿಕೊಟ್ಟಿದ್ದೇನೆ. ಇದುವರೆಗೆ ಒಂದೂ ಕೂಡ ಬಂದಿಲ್ಲ.

ಅಧ್ಯಕ್ಷರು.—ಅದು ಏನಾಗಿದೆ ಎಂಬುದನ್ನು ನಾನು ನೋಡುತ್ತೇನೆ. ದಯವಿಟ್ಟು ಕೂತುಕೊಳ್ಳಿ. ಅದು ಏತಕ್ಕೆ ಬಂದಿಲ್ಲ ಎಂಬುದನ್ನು ನಾನು ವಿಚಾರಮಾಡಿ ನೋಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನನ್ನ ಹತ್ತಿರ ಬಂದು ಈ ವಿಚಾರದಲ್ಲಿ ಮಾತನಾಡಿದ್ದಾರೆ. ಮಂಲೆನಾಡು ವಿಶ್ವವಿದ್ಯಾನಿಲಯವನ್ನು ಶಿವಮೊಗ್ಗಾದಲ್ಲಿ ಸ್ಥಾಪಿಸುವ ವಿಚಾರದಲ್ಲಿ ಪ್ರಶ್ನೆಯನ್ನು ಅವರು ಕಳುಹಿಸಿದ್ದಾರೆ. ಇದನ್ನು ನೀವು ಚುಕ್ಕೆ ಗುರ್ತಿಲ್ಲದ ಪ್ರಶ್ನೆಯಾಗಿ ಪರಿವರ್ತನೆ ಮಾಡಿದರೆ ಹೇಗೆ ? ಸ್ವಾಮಿರಾಯರು ಕಳುಹಿಸಿದ ಚುಕ್ಕೆ ಪ್ರಶ್ನೆ ಒಂದಕ್ಕೂ ಕೂಡ ಸರ್ಕಾರದಿಂದ ಉತ್ತರ ಬಂದಿಲ್ಲ. ಅಂದಮೇಲೆ ಅವರು ಏತಕ್ಕೆ ಪ್ರಶ್ನೆಗಳನ್ನು ಕಳುಹಿಸಬೇಕು?

ಅಧ್ಯಕ್ಷರು.—ನನ್ನ ಕೊಠಡಿಗೆ ಅವರು ಬರಲಿ. ವಿಚಾರಮಾಡಿ ನೋಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಚುಕ್ಕೆ ಪ್ರಶ್ನೆ ಎಂದು ಮಾನ್ಯ ಸದಸ್ಯರು ಕಳುಹಿಸಿದ್ದನ್ನು ತಾವು ಚುಕ್ಕೆ ಗುರ್ತಿಲ್ಲದ ಪ್ರಶ್ನೆಯಾಗಿ ಪರಿವರ್ತನೆ ಮಾಡಿದರೆ, ಸದಸ್ಯರು ಪ್ರಶ್ನೆಗಳನ್ನು ಏತಕ್ಕೆ ಕೇಳಬೇಕು ?

(ಗೊಂದಲ)

ಅಧ್ಯಕ್ಷರು.—ನಾನು ಫೈಲನ್ನು ತರಿಸಿ ನೋಡಬೇಕಾಗುತ್ತದೆಂದು ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಅದನ್ನೆಲ್ಲಾ ಇಲ್ಲಿ ತರಿಸಿನೋಡುವುದಕ್ಕಾಗುವುದಿಲ್ಲ. ಇಬ್ಬರು ಮಾನ್ಯ ಸದಸ್ಯರೂ ನನ್ನ ಕೊಠಡಿಗೆ ಬಂದರೆ ಫೈಲು ತರಿಸಿ ನೋಡುತ್ತೇನೆ.